## ಕರ್ನಾಟಕ ವಿಧಾನ ಪರಿಷತ್

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1010 (998)**
**ಸದಸ್ಯರ ಹೆಸರು : ಶ್ರೀ. ಬಿ.ಜಿ.ಪಾಟೀಲ್**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
**ಉತ್ತರಿಸುವ ದಿನಾಂಕ : 12.03.2026**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಯಾದಗಿರಿ ಜಿಲ್ಲೆಯ ಸುರಪುರ ಮತ್ತು ಹುಣಸಗಿ ತಾಲ್ಲೂಕಿನ ಸುಮಾರು 25 ಕ್ಕೂ ಹಳ್ಳಿಗಳ ಜಮೀನಿಗೆ ನೀರುಣಿಸುವ ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯ ಕಾಮಗಾರಿ ಯಾವಾಗ ಪ್ರಾರಂಭಿಸಲಾಯಿತು ಹಾಗೂ ಯೋಜನೆಗೆ ನಿಗದಿಪಡಿಸಿರುವ ಅನುದಾನ ಎಷ್ಟು; | ಬೂದಿಹಾಳ-ಪೀರಾಪೂರ ಏತ ನೀರಾವರಿ ಹಂತ-2ರ ಕಾಮಗಾರಿಗೆ ಸರ್ಕಾರದ ಆದೇಶ ದಿನಾಂಕ:19.11.2020 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯನ್ನು ರೂ.769.34 ಕೋಟಿ ಮೊತ್ತಕ್ಕೆ ದಿನಾಂಕ:26.07.2021 ರಂದು ಗುತ್ತಿಗೆ ವಹಿಸಲಾಗಿದ್ದು, ಇದುವರೆಗೆ ರೂ.632.00 ಕೋಟಿಗಳ ವೆಚ್ಚವನ್ನು ಮಾಡಲಾಗಿರುತ್ತದೆ.<br><br>ಸದರಿ ಏತ ನೀರಾವರಿ ಯೋಜನೆಯ ಪೈಪ್ ಲೈನ್‌ಜಾಲದ ಅಳವಡಿಕೆಗೆ ಕೋವಿಡ್ ಲಾಕ್ ಡೌನ್, ಭೂಸ್ವಾಧೀನದ ತೊಂದರೆಗಳು, ಜಮೀನಿನಲ್ಲಿ ಬೆಳೆದು ನಿಂತ ಬೆಳೆಗಳು ಮತ್ತು ಯೋಜನಾ ಪ್ರದೇಶದಲ್ಲಿ ಅತಿಯಾದ ಮಳೆಯ ಕಾರಣಗಳಿಂದಾಗಿ ವಿಳಂಬವಾಗಿರುತ್ತದೆ.<br><br>ಪ್ರಸ್ತುತ ಕಾಮಗಾರಿಯು ಬಹುತೇಕ ಭೌತಿಕವಾಗಿ ಪೂರ್ಣಗೊಂಡಿದ್ದು, ನಿಗಧಿತ ಅಚ್ಚುಕಟ್ಟು 17,805 ಹೆಕ್ಟರ್‌ಗಳಿಗೆ 853 ಔಟ್‌ಲೆಟ್ ಪೈಕಿ 800 ಔಟ್‌ಲೆಟ್ ಗಳನ್ನು ಅಳವಡಿಸಲಾಗಿದೆ ಹಾಗೂ ಸುಮಾರು 250 ಔಟಲೇಟ್‌ಗಳಿಗೆ ಪ್ರಾಯೋಗಿಕವಾಗಿ ನೀರು ಹರಿಸಿ ಪರೀಕ್ಷಿಸಲಾಗಿದೆ. ಉಳಿದ ಔಟಲೇಟ್‌ಗಳಿಗೆ ಪ್ರಾಯೋಗಿಕವಾಗಿ ನೀರು ಹರಿಸಿ ಪರೀಕ್ಷಿಸುವ ಕಾರ್ಯ ಪ್ರಗತಿಯಲ್ಲಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ರೈತರಿಗೆ ನೀರನ್ನು ಹರಿಸಲು ಕ್ರಮ ಕೈಗೊಳ್ಳಲಾಗುವುದು. |
| (ಆ) | ಸದರಿ ಏತ ನೀರಾವರಿ ಯೋಜನೆಯು ಪ್ರಾರಂಭವಾಗಿ ಹಲವು ವರ್ಷಗಳೇ ಕಳೆದರೂ ಈವರೆಗೂ ರೈತರ ಜಮೀನುಗಳಿಗೆ ನೀರು ತಲುಪದಿರಲು ಕಾರಣವೇನು; | |
| (ಆ) | ಸದರಿ ಏತ ನೀರಾವರಿ ಯೋಜನೆಯು ಪ್ರಾರಂಭವಾಗಿ ಹಲವು ವರ್ಷಗಳೇ ಕಳೆದರೂ ಈವರೆಗೂ ರೈತರ ಜಮೀನುಗಳಿಗೆ ನೀರು ತಲುಪದಿರಲು ಕಾರಣವೇನು; | |
| (ಇ) | ಈ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ ಮತ್ತು ರೈತರ ಭೂಮಿಗೆ ನೀರು ಹರಿಸಲು ಸರ್ಕಾರ ನಿಗದಿ ಪಡಿಸಿರುವ ಕಾಲಮಿತಿ ಎಷ್ಟು? | |

ಸಂಖ್ಯೆ:ಜಸಂಇ 13 ಡಬ್ಲೂಬಿಎಂ 2026

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**